‘ಅಣ್ಣ... ಅಸ್ಲಾಮಣ್ಣ ಸೂಲುಪ ಬಂದೋಗಣ’ ಹಿತ್ತಲಿನಲ್ಲಿಟ್ಟಿದ್ದ ಪಲಾವು ‘ಡೇಕ್ಷಾ’ದತ್ತ ಖಾಲಿ ‘ಡೀಸು’ ಹಿಡಿದುಕೊಂಡು ಗಡಿಬಿಡಿಯಿಂದ ಹೋಗುತ್ತಿದ್ದ ಅಸ್ಲಾಂನನ್ನು ಕರೆದಳು ಅಬಿದಾ.

ತಲೆ ತಿರುಗಿಸಿ ‘ಇರು ಬರ್ತೀನಿ’ ಎಂಬಂತೆ ಕೈಬೀಸಿ ಹೊರಡಲನುವಾದ ಅಸ್ಲಾಂ. ‘ಅಣ್ಣ... ಅಣ್ಣ ಒಂದು ನಿಮಿಷ’ ಬೇಡಿಕೊಳ್ಳುವಂತೆ ಕೂಗಿದಳು.

‘ಏನಮ್ಮಿ... ಬೇಗ ಹೇಳು. ಆಕಡೆ ಎಲೆ ಹಾಕಿದ್ದಾರೆ’ ಎಂದು ಏದುಸಿರು ಬಿಡುತ್ತಾ ನಿಂತ. ಅಸ್ಲಾಂ ಗಿಡ್ಡಗೆ ಅಗಲವಾಗಿ ದಿಮ್ಮಿಯಂತಿರುತ್ತಾನೆ. ಗಡಿಗೆಯಾಕಾರದ ಹೊಟ್ಟೆ. ಶರಟಿನ ಮಧ್ಯದ ಬಟನ್ ಬಿದ್ದು ಹೋದದ್ದರಿಂದ ಬೆವರು ಸುರಿಯುತ್ತಿರುವ ಹೊಕ್ಕಳು ಕಾಣುತ್ತಿತ್ತು. ಕಣ್ಣಿಗೆ ಹಚ್ಚಿಕೊಂಡ ಅಗ್ಗದ ಸುರ್ಮಾ ಕರಗಿ ಕಣ್ಣ ಕೆಳಗಿನ ಭಾಗವನ್ನು ಕಪ್ಪು ಬಣ್ಣಕ್ಕೆ ಬದಲಿಸಿತ್ತು. ಬಿರುಬಿಸಿಲು ಅವನ ಒರಟು ದೇಹಕ್ಕೆ ಹೊಂದಿಕೊಳ್ಳುತ್ತಿರಲಿಲ್ಲ.

‘ಹೆಣ್ಮಕ್ಕಳನ್ನು ಯಾವಾಗ ಕೂಡಿಸ್ತಾರಣ. ಮಗು ಹಸಿವೆಯಿಂದ ಒದ್ದಾಡ್ತಿದಾನೆ’ ಎಂದಳು ಅಬಿದಾ, ಬೆರಳನ್ನು ಹಿಡಿದು ನಿಂತಿದ್ದ ಪೋರನನ್ನು ತೋರಿಸುತ್ತಾ. ಅಸ್ಲಾಂ ಆಕೆಯನ್ನು ಮೇಲಿಂದ ಕೆಳಗೆ ನೋಡಿದ. ‘ಏನಮ್ಮಿ ನಕರಾ ಮಾಡ್ತೀದೀಯಾ. ಈಗಲೇ ಗಂಡಿನ ಕಡೆಯವರು ಮೊದಲ ಪಂಕ್ತಿಯಲ್ಲಿ ಕುಂತಾರ. ಅವರ ಕಡೆಯೋರೆ ಇನ್ನು ಎರಡು ಪಂಕ್ತಿಗಳಿಗೆ ಆಗುವಷ್ಟು ಇದಾರೆ. ಅವರದು ಮುಗಿದ ಮೇಲೆ ಅವರ ಹೆಣ್ಮಕ್ಕಳು, ನಂತರ ನಮ್ ಗಂಡಸರು. ಎಲ್ಲಾ ಮುಗಿದ ಮೇಲೆಯೇ ನಿಮ್ದು. ನಿನ್ ಮಗನಿಗೆ ಹಸಿವೆಯಾಗಿದ್ರೆ ಅವನನ್ನ ಎತ್ತಿಕೊಂಡು ಡೇಕ್ಷಾ ಬಳಿ ಬಾ ನೀಡ್ತೀನಿ. ಅಲ್ಲಿಯೇ ತಿನ್ನಿಸುವಂತೆ’ ಎಂದು ಹೇಳುತ್ತಾ ಹೊರಟುಹೋದ.

ಅಬಿದಾಳಿಗೆ ಪತ್ರಾವಳಿ ಎಲೆ ಎತ್ತಿಕೊಂಡು ಡೇಕ್ಷಾ ಬಳಿ ಹೋಗಲು ಮುಜುಗರ ಅನಿಸಿತು. ಮಗು ಘಳಿಗೆಗೊಮ್ಮೆ ‘ಹಸಿವೆ ಮಾ’ ಎನ್ನುತ್ತಿದ್ದಾನೆ. ಒಂದು ಕ್ಷಣ ಮನಸು ಎಳೆಯಿತು ಹೋಗೋಣವೆಂದು. ಆದರೂ ಸಮಾಧಾನ ಮಾಡಿಕೊಂಡು ಹೆಣ್ಣಿನ ಕಡೆಯವರು ಕುಳಿತಿದ್ದ ಚಾವಡಿಯ ಬಳಿ ಹೋಗಿ ಕುಳಿತುಕೊಂಡಳು. ಅಲ್ಲಿ ಹೆಂಗಸರೆಲ್ಲರೂ ಗುಂಪು-ಗುಂಪಾಗಿ ಕುರ್ಚಿಗಳಲ್ಲಿ ಕೂತಿದ್ದರು.

ಚಮಕಿ ರವಿಕೆಗಳು, ಕೆಂಪು-ಪಾಚಿ ಬಣ್ಣದ ಸೀರೆಗಳೊಂದಿಗೆ ಚಾವಡಿ ಝಗಮಗಿಸುತ್ತಿತ್ತು. ವಯಸ್ಸಿಗೆ ಬಂದ ಹದಿಹರೆಯದವರು ತುಸು ದೂರ ಕೂತು ಕಿಲಕಿಲನೆ ನಗುತ್ತಿದ್ದರು. ಸುತ್ತಲೂ ಅತ್ತರು ಮಿಶ್ರಿತ ಬೆವರಿನ ವಾಸನೆ.

‘ಇನ್ನೆಷ್ಟು ಹೊತ್ತು ತಾಯಿ ಊಟಕ್ಕೆ’ ಎಂದು ವಯಸ್ಸಾದ ಹೆಣ್ಣುಮಗಳು ಅಬಿದಾಳನ್ನು ಕೇಳಿದಳು. ಹಸಿವೆಯಿಂದಲೋ, ಬಿಸಿಲಿನಿಂದಲೋ ಆಕೆ ತುಂಬಾ ಆಯಾಸ ಪಡುತ್ತಿದ್ದಳು. ಗಳಿಗೆಗೊಮ್ಮೆ ಎದೆಗೆ ಗಾಳಿ ಬೀಸಿಕೊಳ್ಳುತ್ತಿದ್ದಳು. ‘ಗಂಡಸರು ಇದ್ದಾರಂತೆ ಅತ್ತಿಗೆ. ಅವರದು ಆದ ಮೇಲೆ ನಮ್ದು’ ಎಂದಳು ಅಬಿದಾ. ಆಕೆ ಅತ್ತಿತ್ತ ನೋಡುತ್ತಾ ಮುಂದಕ್ಕೆ ಬಾಗಿ ರಹಸ್ಯ ಹೇಳುವವಳಂತೆ ‘ಅಡುಗೆ ಕಡಿಮೆ ಬೀಳಬಹುದಂತೆ’ ಎಂದಳು.

‘ನನಗೂ ಅನುಮಾನ ಇದೆ. ಮಗುಗಾದರೂ ತಿನ್ಸಣ ಅಂದ್ರೆ ಎಲೆ ತಗೊಂಡು ಡೇಕ್ಷಾ ಹತ್ತಿರ ಬಾ ಅಂತಾನೆ ಅಸ್ಲಾಮಣ್ಣ’ ಎಂದಳು ಅಬಿದಾ.

‘ಆ ಕೆಲಸ ಮಾತ್ರ ಮಾಡಬೇಡ ತಾಯಿ. ಡೇಕ್ಷಾ ಹತ್ತಿರ ಗಂಡಸರೆಲ್ಲಾ ಕೆಳಗೆ- ಮೇಲೆ ತಳ್ಳಾಡಿ ಕೊಳ್ತಿದಾರೆ. ಈಗ ತಾನೇ ಜರೀನಾ ಹೋಗಿ ಅಂಗಡಿಯಲ್ಲಿದ್ದ ಅವಳ ಯಜಮಾನರಿಗೆ ಟಿಫಿನ್ ಬಾಕ್ಸಿನಲ್ಲಿ ಹಾಕಿ ಕೊಡಲು ಕೇಳಿದ್ರೆ ಎಲ್ಲರೂ ಜಗಳ ಮಾಡಿದ್ರಂತೆ. ಸರಕ್ಕನೆ ನಿನ್ನನ್ನು ಏನಾದರೂ ಒಂದು ಮಾತು ಆಡಿದರೆ ನೀನು ತಡ್ಕೊಳಲ್ಲ’ ಅಬಿದಾಳಿಗೆ ಉಪಕಾರವನ್ನು ಮಾಡುವವಳಂತೆ ಪಕ್ಕದ ಹೆಂಗಸೊಬ್ಬಳು ಹೇಳಿದಳು. ಆಕೆಯ ಮಾತುಗಳಿಗೆ ಡೇಕ್ಷಾ ಬಳಿ ಹೋಗಬೇಕೆಂದುಕೊಂಡಿದ್ದ ಯೋಚನೆಯನ್ನೇ ಬದಿಗಿಟ್ಟಳು ಅಬಿದಾ. ಮಗನನ್ನು ಮಡಿಲಲ್ಲಿ ಕೂಡಿಸಿಕೊಂಡು ಉಸ್ಸಪ್ಪಾ ಎನ್ನುತ್ತಾ ಹಿಂದಕ್ಕೆ ವಾಲಿದಳು. ನಿಖಾ ಇಷ್ಟು ತಡವಾಗದಿದ್ದರೆ ಹೆಣ್ಣುಮಕ್ಕಳಿಗೆ ಇಷ್ಟೊಂದು ಸಮಸ್ಯೆ ಆಗುತ್ತಿರಲಿಲ್ಲ. ಇದೆಲ್ಲಾ ಮದುಮಗನಿಂದಲೇ ನಡೆದದ್ದು. ಅವನು ಹಟಮಾರಿ. ನೆಲ್ಲೂರಿನ ಹೂವಿನ ಹಾರ, ಉದಯಗಿರಿ ಕುದುರೆ ಇಲ್ಲದೇ ನಿಖಾ ಮಾಡಿಕೊಳ್ಳುವುದಿಲ್ಲವೆಂದು ಮೊದಲೇ ಎಚ್ಚರಿಸಿದ್ದ. ಉದಯಗಿರಿ ಕುದುರೆ ಬರುವಷ್ಟರಲ್ಲಿ ಬೆಳಗ್ಗೆ ಹತ್ತು ಗಂಟೆಯಾಗಿತ್ತು. ನಿಖಾ ಹನ್ನೊಂದೂವರೆಗೆ. ಹನ್ನೆರಡು ಗಂಟೆಗೆ ದಾವತ್.